**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಅಸಲು ದಾವಾ ಸಂಖ್ಯೆ : 193/2012**

**ಡಿ. ಡಬ್ಲೂ : 1**

---------------------------------------------------------------------------------

**ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ 20.01.2026**

****

**ವಾಟೀ ಸವಾಲುಃ ವಾದಿಯರ ಪರ ವಕೀಲರಾದ ಶ್ರೀ .ಬಿ ಬಿ ಎಸ್ ವಕೀಲರಿಂದಃ**

1. ಮುರಗುಂಡಿ ಗ್ರಾಮದ ಮುರಸಿದ್ದೇಶ್ವರ ದೇವಸ್ಥಾನ ಟ್ರಸ್ಟ ಕಾಯ್ದೆ ಅಡಿ ನೊಂದ ಆಗಿರುತ್ತದೆ ಎಂದರೆ ಸರಿ . ಸದರಿ ಕಾಯ್ದೆಯ ಪ್ರಕಾರ ಪೂಜಾರಿಗಳನ್ನು ನೇಮಿಸಲಾಗಿದೆ ಎಂದರೆ ಸರಿ . ಸದರಿ ದೇವಸ್ಥಾನದ ಪೂಜಾರಿಕೆಯನ್ನು 4 ಕುಟುಂಬದ ಮನೆತನಗಳು ಮಾಡಿಕೊಂಡು ಬಂದಿರುತ್ತವೆ ಅವುಗಳು ಮಗಾಡೆ ಕುಟುಂಬ , ಗಾವಡೆ ಕುಟುಂಬ, ಸಣ್ಣೂರೆ ಕುಟುಂಬ , ಡೊಳ್ಳಿ ಕುಟುಬಂದ ಎಂದರೆ ಸರಿ . ಸಾಕ್ಷಿಯು ಮುಂದುವರೆದ ಸಣ್ಣೂರೆ ಕುಟುಂಬಸ್ಥರನ್ನು ಹೂವಿನವರ ಎಂದು ಸಹ ಕರೆಯುತ್ತಾರೆ. 4 ಕುಟುಂಬಗಳಿಗೆ ಪೂಜಾರಿಕೆಯನ್ನು ಮಾಡಲು ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು 14 ದಿನಗಳಲ್ಲಿ ಪುನಃ 7 ದಿನಗಳ ಅವರ ಅಣ್ಣತಮ್ಮಂದಿರಲ್ಲಿ ಪೂಜಾರಿಕೆಯನ್ನು ಮಾಡುತ್ತಾರೆ ಎಂದು ನುಡಿಯುತ್ತಾರೆ. ಪೂಜಾರಿಕೆಯ ಹಕ್ಕು ಅವರ ಕುಟುಂಬದ ಸದಸ್ಯರು ಹೆಚ್ಚಾಗಿದ್ದರಿಂದ ಹಾಗೂ ಅವರಲ್ಲಿ ವಿಭಜನೆ ಆಗಿರುವುದರಿಂದ ಪೂಜಾರಿಕೆಯ ದಿನ ಯಾವಾಗ ಬರುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ನನ್ನ ಕುಟುಂಬಕ್ಕೆ 7 ದಿನದ ಪೂಜಾರಿಕೆ ಹಕ್ಕು 6 ವರ್ಷಕ್ಕೆ ಒಮ್ಮೆ ಬರುತ್ತದೆ ಎಂದರೆ ಸಾಕ್ಷಿಯು ನಮ್ಮ ನಮ್ಮಲ್ಲಿ ವಿಭಜನೆ ಆಗಿರುವುದರಿಂದ ಒಮ್ಮೆ 6 ವರ್ಷಕ್ಕೆ ಬರುತ್ತದೆ ಮತ್ತೊಮ್ಮೆ 12 ವರ್ಷಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ದೇವಸ್ಥಾನದ ಪೂಜಾರಿಕೆಯನ್ನು ಗಾವಡೆ ಕುಟುಂಬಸ್ದರಿಗೆ ನನ್ನನ್ನು ಹೊರತು ಪಡಿಸಿ ಉಳಿದ ಮಗಾಡೆ ಕುಟುಬಂದವರಾಗಲಿ, ಸಣ್ಣೂರೆ ಕುಟುಂಬದವರಾಗಲಿ, ಡೊಳ್ಳಿ ಕುಟುಂಬದವರಾಗಲಿ ಹರಕತ ಮಾಡಿಲ್ಲ ಎಂರದೆ ಸರಿ . ಸಾಕ್ಷಿಯು ಮುಂದುವರೆದು ನನ್ನ ತಂದೆಯಿಂದ ನನಗೆ ಹಕ್ಕು ಬಂದಿರುತ್ತದೆ ಎಂದು ನುಡಿಯುತ್ತಾರೆ. ಪೂಜಾರಿಕೆಯ ಹಕ್ಕು ತಂದೆ ತೀರಿದ ಬಳಿಕ ಅವರ ಮಕ್ಕಳಿಗೆ ವಾರಸಾ ನಾತೆಯಿಂದ ಹೋಗುತ್ತದೆ ಎಂದರೆ ಸರಿ . ಟ್ರಸ್ಟ ಪ್ರಕಾರ ಪೂಜಾರಿಕೆಯ ಹಕ್ಕು ವಾರಸುದಾರರಿಗೆ ಮಾತ್ರ ಹೋಗುತ್ತದೆ ಎಂದರೆ ಸಾಕ್ಷಿಯು ಪೂಜಾರಿಕೆ ಬೇರೆ ಹಾಗೂ ಟ್ರಸ್ಟ ಬೆರೆ ಎಂದು ನುಡಿಯುತ್ತಾರೆ. ಪೂಜರಿಕೆಯ ಹಕ್ಕನ್ನು

ಮಾರಾಟ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಪೂಜಾರಿಕೆಯ ಹಕ್ಕನ್ನು ನಮ್ಮ ನಮ್ಮ ಒಳಗೆ ಕೊಡಬಹುದು ಆದರೆ ಬೇರೆಯವರಿಗೆ ಕೊಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿಯ ನಿಯಮ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ರೂಢಿಗತವಾಗಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಪೂಜಾರಿಕೆಯ ಹಕ್ಕನ್ನು ಖರೀದಿಸಿದ ಉದಾಹರಣೆಗಳು ಇರುತ್ತವೆ. ಪೂಜಾರಿಕೆಯ ಹಕ್ಕನ್ನು ಖರೀದಿಸುವ ಹಕ್ಕು ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಿಡಿ 1 ನ್ನು ಬೇರೆ ಅಧಿಕಾರಿಗಳ ಮುಂದೆ ಎಲ್ಲಾದರೂ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ದಾಖಲಾತಿ ಯಾರ ಬಳಿ ಇತ್ತು ಎಂದರೆ ಸಾಕ್ಷಿಯು ನನ್ನ ತಂದೆಯ ಬಳಿ ಇತ್ತು ಎಂದು ನುಡಿಯುತ್ತಾರೆ. ನಿಡಿ 1 ದಾಖಲಾತಿ ಆದಾರದ ಮೇರೆಗೆ ಯಾವುದಾದರೂ ಅಧಿಕಾರಿಗಳಿಗೆ ನೀಡಿ ಹೆಸರು ಹಚ್ಚಲು ಪ್ರಯತ್ನಿಸಿದ್ದಾರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ 1 ದಾಖಲಾತಿ ಆದಾರದ ಮೇಲೆ ನಿಮ್ಮ ತಂದೆ ತೀರಿದ ಬಳಿಕ ನಿಮ್ಮ ಹೆಸರನ್ನು ಹಚ್ಚಿ ಸಲು ಏನಾದರೂ ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ರ ಆದಾರದ ಮೇಲೆ ಟ್ರಸ್ಟ ಅಧಿಕಾರಿಗೆ ಏನಾದರೂ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ರ ಆದಾರದ ಮೇಲೆ ನೀವಾಗಲಿ ನಿಮ್ಮ ತಂದೆಯಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ1 ನ್ನು ನನ್ನ ತಂದೆ ಖೊಟ್ಟಿ ರೀತಿಯಿಂದ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ1 ಖೊಟ್ಟಿ ಇರುವುದರಿಂದ ಸದರಿ ದಾಖಲಾತಿ ಆದಾರದ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ.

3. ಮುರಗುಂಡಿ ಗ್ರಾಮದಲ್ಲಿ ಇರುವ ಮನೆಗಳಿಗೆ ಪಂಚಾಯತಿಯವರು ಸಂಖ್ಯೆಗಳನ್ನು ನೀಡಿರುತ್ತಾರೆ ಎಂದರೆ ಸರಿ . ನಿಮ್ಮ ತಂದೆಯವರು ಖರೀದಿಸಿದ ಆಸ್ತಿಗಳಿಗೆ ಪಂಚಾಯತಿಯವರು ಯಾವ ಸಂಖ್ಯೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಖರೀದಿಸಿರುವ ಆಸ್ತಿಗಳಿಗೆ ವಿಠ್ಠಲ ಇರುವವರೆಗೆ ಅವರ ಹೆಸರಿನಲ್ಲಿ ಅವನ ಮರಣಾನಂತರ ಅವನ ಮಕ್ಕಳ ಹೆಸರಿನಲ್ಲಿ ಆಗಿರುತ್ತವೆ ಎಂದರೆ ಸರಿ . ವಿಠ್ಠಲನ ಮಕ್ಕಳು ಸದರಿ ಆಸ್ತಿಗಳ ಕಬ್ಜಾ ವಹಿವಾಟನಲ್ಲಿ ಇರುತ್ತಾರೆ ಹಾಗೂ ಪಂಚಾಯತಿ ಪಾಳೆ ಅವರೆ ತುಂಬುತ್ತಾರೆ ಎಂದರೆ ಸಾಕ್ಷಿಯು ಅದನ್ನು ಪಂಚಾಯತಿಯಲ್ಲಿ ದಾಖಲು ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಡಿ 1 ಯಾವತ್ತು ಸಹ ಕಾರ್ಯಗತಗೊಂಡಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪ ತನ್ನ ಜೀವಿತ ಕಾಲದಲ್ಲಿ 1952 ರಲ್ಲಿ ಪೂಜಾರಿಕೆಯನ್ನು ಟ್ರಸ್ಟ ಕಾಯ್ದೆ ಅಡಿ ನೊಂದಾಯಿಸಿಕೊಂಡಿರುತ್ತಾನೆ

ನಂತರ ಅವನು ಮರಣ ಹೊಂದಿದ ಬಳಿಕ ವಿಠ್ಠಲ ಈತನಿಗೆ ಪೂಜಾರಿಕೆ ಹಕ್ಕನ್ನು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. 4 ಕುಟುಂಬಗಳ ಪೂಜಾರಿಕೆಗೆ ಹರಕತ ಮಾಡುವ ಅಧಿಕಾರ ಅವರವರಿಗೆ ಇರುವುದಿಲ್ಲ ಎಂದರೆ ಸರಿ . ನಿಂಗಪ್ಪ ಗಾವಡೆ ಈತನು ಯಾವತ್ತು ಸಹ ನನ್ನ ತಂದೆಗೆ ಪೂಜಾರಿಕೆ ಹಕ್ಕನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯರ ಪೂಜಾರಿಕೆ ಹಕ್ಕನ್ನು ಇಲ್ಲಿವರೆಗೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ಪೂಜಾರಿಕೆ ಹಕ್ಕು ಇರುತ್ತದೆ ಎಂದು ತೋರಿಸಲು ನಿಡಿ1 ನ್ನು ಹೊರತುಪಡಿಸಿ ಬೇರೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ವಿಠ್ಠಲ ಮುರಾರಿ ಗಾವಡೆ ಇವರ ಪೂಜಾರಿಕೆಯನ್ನು ನಾವು ಹರಕತ ಮಾಡಿದ್ದರಿಂದ ಅವರು ಎಸ್ ಪಿ ರವರಿಗೆ ಫಿರ್ಯಾದಿಯನ್ನು ನೀಡಿದ್ದರು ಎಂದರೆ ಸರಿ . ಟ್ರಸ್ಟ ನವರು ವಾದಿಯರ ಪೂಜಾರಿಕೆಗೆ ಹರಕತ ಮಾಡಬಾರದು ಎಂದು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಟ್ರಸ್ಟ ನವರ ಮಾತು ನಾವು ಕೇಳದೆ ಇರುವುದರಿಂದ ವಾದಿಯರು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಸ್ವತ್ತಿನ 7 ದಿನಗಳ ಕಾಲ ಪೂಜಾರಿಕೆ ಮಾಡುವ ಹಕ್ಕು ಇರುತ್ತದೆ ಅದನ್ನು ಹರಕತ ಮಾಡುವ ಅಧಿಕಾರ ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ1 ರ ಪ್ರಕಾರ ನಾವು ಯಾವತ್ತು ಸಹ ಪೂಜಾರಿಕೆ ಮಾಡಿಲ್ಲ ಎಂದರೆ ಸರಿಯಲ್ಲ. ಮುರಸಿದ್ದೇಶ್ವರ ದೇವಸ್ಥಾನವು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಊರಿನ ಒಳಗಡೆ ಇರುತ್ತದೆ ಎಂದು ಬೆರಸಿರುತ್ತೇನೆ ಎಂದರೆ ಸಾಕ್ಷಿಯು ಎರಡು ಮುರಸಿದ್ದೇಶ್ವರ ದೇವಸ್ಥಾನಗಳು ಇರುತ್ತವೆ ಒಂದು ಊರಿನ ಒಳಗೆ ಇನ್ನೊಂದು ಊರಿನ ಅರ್ದ ಕಿ ಮೀ ಹೊರಗೆ ಎಂದು ನುಡಿಯತ್ತಾರೆ. ವಾದಿಯರ ಪೂಜಾರಿಕೆ ಹಕ್ಕನ್ನು ಎತ್ತಿ ಹಾಕಬೇಕೆಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.